

# ಹಸುರಾಭರಣ

ಪ್ರಕೃತಿಗೆ ಸನಿಹವಾದ ಆಭರಣ ಹಸುರಾಭರಣ. ಜೇಡ್, ಎಮರಾಲ್ಡ್, ಪಚ್ಚೆ ಕಲ್ಲುಗಳನ್ನು ಚಿನ್ನದ ಜೊತೆಗೆ ಸೇರಿಸಿ ಮಾಡುವ ಈ ಆಭರಣ ಯುವತಿಯರ ಹಾಟ್ ಫೇವರೆಟ್ ಆಗಿದೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಚಿತ್ರಗಳು: ಮುಳಿಯ ಕೇಶವ ಭಟ್

ಪಚ್ಚೆ ಹರಳಿನ ನೆಕ್ಲೇಸ್, ಎಮರಾಲ್ಡ್ ಕಿವಿಯೋಲೆ, ಜೇಡ್‌ನ ಹಾರ... ಎಲ್ಲವೂ ಹಸುರುಮಯ, ಹಸುರು ಆಭರಣದ ಸ್ವರೂಪಗಳು. ಕಡುಬಣ್ಣದ ಜರಿಸೀರೆಗೆ ಸಖತ್ ಆಗಿ ಕಾಣುವ ಹಸುರು ವರ್ಣದ ಒಡವೆಗಳು ಪ್ರಕೃತಿಗೆ ಸನಿಹವಾಗಿರುವಂಥವು. ಪ್ರಕೃತಿಯನ್ನು ಆಧಾರವಾಗಿಟ್ಟು ಜೀವನ ಕ್ರಮವನ್ನು ನಾವು ಅನುಸರಿಸಿ ನಡೆಸುತ್ತೇವೆ. ಹಾಗೇ ಆಭರಣದಲ್ಲೂ ಪ್ರಕೃತಿಯ ಮಧ್ಯಸ್ಥಿಕೆ ಮನಸ್ಸಿಗೆ ಮುದ ನೀಡುವಂಥವು.

ಹಸುರು ಆಭರಣದಲ್ಲಿ ಇಂದು ಡ್ರಾಪ್ ಶೇಪ್‌ನ ಹರಳಿನ ಆಭರಣ ಬಹಳ ಪ್ರಸಿದ್ಧಿ. ಏಕೆಂದರೆ ಡ್ರಾಪ್ ಶೇಪ್ ಎಂದರೆ ಮೇಲಿನಿಂದ ಕೆಳಗೆ ನೀರು ಬೀಳುವಾಗ ಉಂಟಾಗುವ ಒಂದು ಆಕಾರವೇ ಆಗಿದೆ. ಇದನ್ನು 'ಡ್ರಾಪ್ ಶೇಪ್ ಆಭರಣ' ಎಂದು ಕರೆಯುತ್ತೇವೆ. ಇದನ್ನು ಪ್ರಕೃತಿಯ ಪ್ರತಿಕೃತಿ ಎಂತಲೂ ಕರೆಯಬಹುದು.

## ಗೊಂಚಲು ಡ್ರಾಪ್ ಶೇಪ್ ನೆಕ್ಲೇಸ್

ಆಭರಣದಲ್ಲಿರುವ ಹರಳು ಒಂದೇ ತರಹ ಇದ್ದರೂ ಅದನ್ನು ಜೋಡಿಸುವ ರೀತಿಯಲ್ಲಿ ಬಹಳ ವಿಶೇಷವಾಗಿ, ಅದ್ಭುತವಾಗಿ ಕಾಣುವಂತೆ ಮಾಡಬಹುದು. ಹೂವಿನ ವಿನ್ಯಾಸದ ನೆಕ್ಲೇಸ್ ಅನ್ನು 'ಪ್ರಾಂಗ್ ಸೆಟ್ಟಿಂಗ್'ನಲ್ಲಿ ಮಾಡುವಾಗ ಜರ್ಕೋನ್ ಸ್ಟೋನ್ ತಿಳಿ ಗುಲಾಬಿ ಬಣ್ಣದ್ದಾದರೆ ತುಂಬ ಚೆನ್ನಾಗಿ ಕಾಣುತ್ತದೆ. ಇದರ ಜೊತೆಗೆ ಯಾವಾಗಲೂ ಕೋನ್‌ಟ್ರಸ್ಟ್ ಬಣ್ಣದ ಎಮರಾಲ್ಡ್‌ನ ಇಮಿಟೇಶನ್ ಬೀಡ್ಸ್ ಇದ್ದಾಗ ಅದು ಆಭರಣಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಹಿಂಬದಿ ಥ್ರೋರಿ (ಹೊಳಪುಳ್ಳ ಬಣ್ಣದ ದಾರ) ಹಾಕಬಹುದು. ಅಥವಾ 3ರಿಂದ 5 ಗ್ರಾಂಗಳಲ್ಲಿ ರಿಂಗ್ ಚೈನ್ ಹಾಕಬಹುದು.

## ಎಲೆ ವಿನ್ಯಾಸದ ನೆಕ್ಲೇಸ್

ಎರಡೂ ಬದಿ ಚೂಪಾಗಿರುವ ರೂಬಿಯಂತೆ ಕಾಣುವ ಹರಳು ಇದು. ಮಾರ್ಕ್ವಾಯಿಸ್ ಆಕಾರದ ಹರಳನ್ನು ಜೋಡಿಸಿ ಎಲೆಯಂತೆ ವಿನ್ಯಾಸಗೊಳಿಸಿ ಇದರ ಜೊತೆಗೆ ತಿಳಿ ಹಸುರು ಹ್ಯಾಂಗಿಂಗ್ ಬಹಳ ಅಂದವಾಗಿರುತ್ತದೆ. 'ಪಾವೆ ಸೆಟ್ಟಿಂಗ್'ನಲ್ಲಿ ಇದನ್ನು ಜೋಡಿಸಿದ್ದು ಫ್ಲೆಕ್ಸಿಬಲ್ ಆಗಿದೆ. ಕೆಂಪು ಹರಳು, ಹಸುರು ಹರಳು ಬಹಳ ಪ್ರಸಿದ್ಧವಾದ ಕಾಂಬಿನೇಷನ್. ರೇಷ್ಮೆ ಸೀರೆ ಉಟ್ಟಾಗ ಬಹಳ ಅಂದ. ಜೊತೆಗೆ ಡ್ರಾಪ್ ಶೇಪ್‌ನ ತುದಿಯಲ್ಲಿ ಸಣ್ಣ ಚಿನ್ನದ ಗುಂಡು ಇದ್ದು ಯುವತಿಯರಿಗೂ ಚೆನ್ನಾಗಿ ಒಪ್ಪುತ್ತದೆ. ಕಿವಿಯೋಲೆಯಲ್ಲಿಯೂ ಹೀಗೆ ಡ್ರಾಪ್ ಶೇಪ್ ಇರಬೇಕು. ಆಗ ಅತೀ ಸುಂದರ.

## ಬಿಳಿ ಪಚ್ಚೆ ಹೂವಿನ ನೆಕ್ಲೇಸ್

ಬಿಳಿ ಬಣ್ಣ ಕಣ್ಣಿಗೆ ಆಕರ್ಷಣೆ ಅಲ್ಲದೆ ಬಿಳಿಯ ಜೊತೆಗೆ ಹಸುರು ಹರಳು ಬಂದಾಗ ಅತ್ಯಾಕರ್ಷಕ. ಕಾರಣ ಇಷ್ಟೆ, ಬಿಳಿಯ ಬಣ್ಣದಲ್ಲಿ ಹಸುರು ಬಣ್ಣ ಎದ್ದು ಕಾಣುತ್ತದೆ. ಆಗ ವಿನ್ಯಾಸದ ನೋಟ ಹೆಚ್ಚು. ಹಸುರು ಸಮೃದ್ಧಿಯ ಸಂಕೇತ. ಹಸುರು ಸೀರೆಗೆ